ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ        ದಿನಾಂಕ : DATE 13/12/19

# ಗುತ್ತಿಗೆ ನೌಕರರಿಗೆ ಗ್ರಾಚ್ಯುಟಿಯ ಹೊಸ ಅನುಕೂಲ

ಉದಯವಾಣಿ 13/12/19

**ನವದೆಹಲಿ:** 'ಸಾಮಾಜಿಕ ಭದ್ರತೆ -2019' ವಿಧೇಯಕದಡಿ ಉದ್ಯೋಗಿಗಳ ಗ್ರಾಚ್ಯುಟಿ ಯೋಜನೆಗೆ ಅಗತ್ಯವಾಗಿರುವ ನಿರಂತರ ಸೇವಾವಧಿಯನ್ನು 5 ವರ್ಷಕ್ಕೆ ಇಳಿಸಿರುವ ಕೇಂದ್ರ ಸರ್ಕಾರ, ಗುತ್ತಿಗೆ ಒಪ್ಪಂದದಡಿ ಸೇವೆ ಸಲ್ಲಿಸುತ್ತಿರುವ ಉದ್ಯೋಗಿಗಳು 5 ವರ್ಷ ಪೂರೈಸುವ ಮೊದಲೇ ತಮ್ಮ ಗ್ರಾಚ್ಯುಟಿ ಹಣ ಪಡೆಯಬಹುದು ಎಂಬ ಹೊಸ ವಿಚಾರವನ್ನು ವಿಧೇಯಕದಲ್ಲಿ ಸೇರಿಸಿದೆ. ಇತ್ತೀಚೆಗೆ ಲೋಕಸಭೆಯಲ್ಲಿ ಮಂಡನೆಯಾಗಿರುವ ಈ ವಿಧೇಯಕದಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉದ್ಯೋಗಿಗಳ ನಿರಂತರ ಸೇವಾವಧಿಯನ್ನು 5 ವರ್ಷಕ್ಕೆ ಇಳಿಸುವ ಪ್ರಸ್ತಾವನೆಯನ್ನು ಈ ಮೊದಲೇ ಸೇರಿಸಲಾಗಿತ್ತು. ಜೊತೆಗೆ, ಖಾಸಗಿ ಕಂಪನಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುವವರಿಗೂ ಈ ನಿಯಮ ಅನ್ವಯವಾಗಬೇಕೆಂದೂ ವಿವರಿಸಲಾಗಿತ್ತು. ಈಗ, ಗುತ್ತಿಗೆ ಉದ್ಯೋಗಿಗಳಿಗೆ ಮತ್ತಷ್ಟು ಅನುಕೂಲ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಇನ್ನುಳಿದಂತೆ, 5 ವರ್ಷಗಳ ನಿರಂತರ ಸೇವೆ ಬಳಿಕ ಉದ್ಯೋಗಿಯನ್ನು ಕೆಲಸದಿಂದ ತೆಗೆದು ಹಾಕಿದರೆ, ಅವಧಿ ಮುಕ್ತಾಯವಾಗಿ ಆತ (ಅಥವಾ ಆಕೆ) ಉದ್ಯೋಗದಿಂದ ಹೊರಬಂದರೆ, 5 ವರ್ಷಗಳ ಸೇವೆಯ ನಂತರ ರಾಜೀನಾಮೆ ಸಲ್ಲಿಸಿದರೆ, ಅಪಘಾತದಲ್ಲಿ ಮರಣ ಹೊಂದಿದರೆ ಅಥವಾ ಅಂಗವಿಕಲನಾದರೆ, ಕಾಯಿಲೆಗೆ ತುತ್ತಾದರೆ, ಸೇವಾ ಒಪ್ಪಂದವನ್ನು ಕಂಪನಿಯೇ ರದ್ದು ಮಾಡಿದರೆ – ಈ ಎಲ್ಲಾ ಕಾರಣಗಳಲ್ಲೂ ಕಂಪನಿಯು ನೌಕರನಿಗೆ ಗ್ರಾಚ್ಯುಟಿ ಹಣ ನೀಡಬೇಕೆಂದು ವಿಧೇಯಕದಲ್ಲಿ ಹೇಳಲಾಗಿದೆ.